ಓ ಎಸ್ ನಂ. 241/2015
ಡಿ ಡಬ್ಲ್ಯೂಃ 2

<u>ಸಾಕ್ಷಿಯನ್ನು ದಿನಾಂಕಃ **12-06-2026** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರವರಿಂದಃ</u>

ಈ ಕೇಸನ್ನು ಪ್ಯಾರಿಮಾಬೀ ಇವರು ಬಿ ಎಂ ಯೂನುಸಾಬ್ ರವರ ಮೇಲೆ ಹಾಕಿರುವರು. ಬಿ ಎಂ ಅಬ್ದುಲ್ ಆಫೀಜ್ ಇವರು ಹರಪನಹಳ್ಳಿಯರುವರಾ ಎಂದರೆ ಕೂಡ್ಲಿಗಿಯಲ್ಲಿರುವರು. ದಾವಾಸ್ತಿಯ ಸರ್ವೆ ನಂ. 161 ಸಿ2 ಇರುವುದು. ಅದರ ವಿಸ್ತೀರ್ಣ ಒಟ್ಟು 8 ವರೆ ಸೆಂಟ್ಸ ಇದ್ದು ಆ ಪೈಕಿ 2 ಸೆಂಟ್ಸನ್ನು ಮುಸ್ಲಿಂ ಮೈನಾರಿಟಿ ಅಧ್ಯಕ್ಷರು ಡಿ ಅಬ್ದುಲ್ ಹಫೀಜ್ ಕೂಡ್ಲಿಗಿ ಇವರು ಖರೀದಿಗೆ ಪಡೆದುಕೊಂಡಿರುವರು. ಸದರಿ ಖರೀದಿ ವ್ಯವಹಾರ ನಡೆದಾಗ ನಾನು ಇರಲಿಲ್ಲ. ದಾವಾಸ್ತಿ ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಖರೀದಿಯಾದ ಸಮಯದಲ್ಲಿ ದಾವಾಸ್ತಿ ಮನ್ಸೂರ್ ರವರ ತಂದೆಯ ಹೆಸರಿನಲ್ಲಿತ್ತು. ದಿಃ07-03-2007 ರ ಕ್ರಯಕರಾರು ಪತ್ರವನ್ನು ನೊಂದಣಿ ಮಾಡಿಸಿಲ್ಲ. ಮನ್ಸೂರ್ ರವರಾಗಲೀ ಅವರ ಹೆಂಡತಿಯಾಗಲೀ ಡಿ ಎಂ ಅಬ್ದುಲ್ ಹಫೀಜ್ ಇವರಿಗೆ ಯಾವುದೇ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲವೆಂದರೆ ಸರಿಯಲ್ಲ.

ದಿಃ20-04-2010 ರಂದು ಮತ್ತೊಂದು ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿರುವರು. ಸದರಿ ಕರಾರು ಪತ್ರವು ರೂ.1 ಲಕ್ಷದ 10 ಸಾವಿರಕ್ಕೆ ಆಗಿತ್ತು. ಸದರಿ ಕರಾರು ಪತ್ರ ಕೂಡಾ ನೊಂದಣಿಯಾಗಿಲ್ಲ. ಪತ್ರವನ್ನು ಖಲಂದರ್ ಸಾಬ್ ಬರೆದಿದಿರುವರು. ಮುಸ್ಲಿಂ ಮೈನಾರಿಟಿ ಎಡ್ಯೂಕೇಶನ್ ಟ್ರಸ್ಟ ಇದು ಅಸ್ತಿತ್ವದಲ್ಲಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ವಾದಿಯ ಗಂಡ ಮನ್ಸೂರ್ ಸಾಬ್ ರವರ ತಂದೆ ತೀರಿದ ನಂತರ ಮಕ್ಕಳೆಲ್ಲರೂ ಆಸ್ತಿಗಳನ್ನು ಭಾಗ ಮಾಡಿಕೊಂಡರೆಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗವಾದ ನಂತರ ಮನ್ಸೂರ್ ಸಾಬ್ ರವರ ಹೆಸರಿಗೆ ಖಾತೆ ಬದಲಾವಣೆಯಾಯಿತು ಎಂದರೆ ನನಗೆ ಗೊತ್ತಿಲ್ಲ. ಮನ್ಸೂರ್ ಸಾಬ್ ರವರು ವಾದಿಯ ಹೆಸರಿಗೆ ದಾನಪತ್ರವನ್ನು ಬರೆದುಕೊಟ್ಟಿರುವರು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ಇಂದಿಗೂ ಕೂಡಾ ವಾದಿ ಹಾಗೂ ಮನ್ಸೂರ್ ಸಾಬ್ ರವರ ಹಕ್ಕು ಸಾವಧೀನಾನುಭವದಲ್ಲಿರುವುದು ಎಂದರೆ ಸರಿಯಲ್ಲ. ನಾನು, ಪ್ರತಿವಾದಿ ಹಾಗೂ ಪತ್ರ ಬರಹಗಾರರು ಸೇರಿಕೊಂಡು

ಓ ಎಸ್ ನಂ. 241/2015
ಡಿ ಡಬ್ಲ್ಯೂ: 2

ಕರಾರುಪತ್ರಗಳನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

12-06-2026

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ